# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೋಟಗಾರಿಕೆ ಇಲಾಖೆ

1. **ಪರಿಚಯದೊಂದಿಗೆ ಇಲಾಖೆಯ ಧ್ಯೇಯೋದ್ದೇಶಗಳು:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಾರ್ವಜನಿಕ ಉದ್ಯಾನವನಗಳನ್ನು ಕಟ್ಟಿ, ಬೆಳೆಸಿ, ಹೆಚ್ಚಿನ ವಿಸ್ತರಕ್ಕೆ ಏರಿಸಲು ಮತ್ತು ನಿರ್ವಹಿಸಲು ತೋಟಗಾರಿಕೆ ಇಲಾಖೆಯನ್ನು ಮಾಡಲಾಗಿದೆ. ಎಲ್ಲಾ ಉದ್ಯಾನಗಳನ್ನು ಉತ್ತಮ, ಶುಚಿಯಾದ ಮತ್ತು ಹಸಿರು ವನವನ್ನಾಗಿ ಪರಿವರ್ತಿಸಿ ನಗರದ ಸಣ್ಣ ಮಗುವಿನಿಂದ ವಯೋವೃದ್ಧರತನಕ ಪ್ರತಿಯೊಬ್ಬ ನಾಗರಿಕನಿಗೂ ಇದರ ಪ್ರಯೋಜನ ಸಿಗುವಂತೆ ಮಾಡುವುದು, ಉದ್ಯಾನವನಗಳಲ್ಲಿ ಹೆಚ್ಚಿನ ಖಾಲಿ ಜಾಗಗಳನ್ನು ಅಭಿವೃದ್ಧಿ ಪಡಿಸುವುದು, ಸಣ್ಣ ಅರಣ್ಯಗಳ ನಿರ್ಮಾಣ, ನಡೆದಾಡುವುದಕ್ಕೆ ಸಾಲುಮರಗಳ ವಿಶಾಲವಾದ ಮಾರ್ಗಗಳನ್ನು ಅಭಿವೃದ್ಧಿ ಪಡಿಸುವುದು ಇಲಾಖೆಯ ಉದ್ದೇಶಗಳಾಗಿವೆ.

2. **ಇಲಾಖೆಯಿಂದ ಸಿಗುವ ಸೇವೆಗಳು:**

ನಡೆದಾಡುವುದಕ್ಕೆ ಸಾಲುಮರಗಳ ವಿಶಾಲವಾದ ಮಾರ್ಗಗಳು, ಮಕ್ಕಳ ಆಟದ ಅಂಗಳದಲ್ಲಿ ಆಟಿಕೆಗಳನ್ನು ಒದಗಿಸುವುದು, ಗಿಡಗಳನ್ನು ನೆಡುವುದು, ಎಲ್ಲಾ ಉದ್ಯಾನಗಳನ್ನು ಉತ್ತಮ, ಶುಚಿಯಾದ ಮತ್ತು ಹಸಿರು ವನವನ್ನಾಗಿ ವರ್ಷ ಪೂರ್ತಿ ನಿರ್ವಹಿಸುವುದು ಮೊದಲಾದ ಸೇವೆಗಳನ್ನು ತೋಟಗಾರಿಕಾ ಇಲಾಖೆಯು ಸಾರ್ವಜನಿಕರಿಗೆ ನೀಡುತ್ತದೆ.